ಮಾಡಲಾಗುತ್ತಿದೆ.

1. ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ - ರೂ. 50,000-00

2. ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಘಟಕಕ್ಕೆ - ರೂ. 30,000-00

3. ಪ್ರತಿಯೊಂದು ಸಮುದಾಯ ಆರೋಗ್ಯ ಕೇಂದ್ರಕ್ಕೆ

(ಸಾರ್ವಜನಿಕ ಆಸ್ಪತ್ರೆಗೆ ಹೊಂದಿಕೊಂಡಂತೆ) - ರೂ. 3,00,000-00

4. ಪ್ರತಿಯೊಂದು ಸಮುದಾಯ ಆರೋಗ್ಯ ಕೇಂದ್ರಕ್ಕೆ

(ತಾಲ್ಲೂಕು ಮಟ್ಟದ) - ರೂ. 2,00,000-00

ಆ) 1) ಔಷಧಿಗಳ ದಾಸ್ತಾನು ಲಭ್ಯತೆ

2) ಔಷಧಿಗಳ ಬೇಡಿಕೆ ಅಥವಾ ಅನುಮೋದಿಸಿದ ಪಟ್ಟಿ

3) ಆಸ್ಪತ್ರೆಗಳಿಗೆ ವಾರ್ಷಿಕವಾಗಿ ಬಿಡುಗಡೆಯ ಅನುದಾನದಂತೆ

4) ವಿಶೇಷ ಸಂದರ್ಭಗಳಲ್ಲಿ ಅಂದರೆ ಸಾಂಕ್ರಾಮಿಕ ರೋಗಗಳು ಹರಡಿದಾಗ ಹಾಗೂ ಪ್ರಕೃತಿ ವಿಕೋಪಗಳು ಉಂಟಾದ ಸಂದರ್ಭಗಳಲ್ಲಿ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆ.

ಇ) ಹೌದು.

ಮೈಸೂರು ಮಹಾನಗರ ಪಾಲಿಕೆಗೆ ಪರಿಸರ ಮಾಲಿನ್ಯ ಇಲಾಖೆಯಿಂದ ಸೂಚನಾ ಪತ್ರ ನೀಡಿರುವುದು

1457 (2065)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಮತ್ತು ಪರಿಸರ ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮಹಾನಗರ ಪಾಲಿಕೆಗೆ ಪರಿಸರ ಇಲಾಖೆಯಿಂದ ಸೂಚನಾ ಪತ್ರ (NOTICE) ನೀಡಿರುವುದು ನಿಜವೇ

ಅ) ಈ ಸೂಚನಾ ಪತ್ರವನ್ನು ಯಾವ ಕಾರಣಕ್ಕೆ ನೀಡಲಾಯಿತು

ಇ) ಈ ಸೂಚಚನಾ ಪತ್ರ ತಲುಪಿದ ನಂತರ ನಗರ ಪಾಲಿಕೆಯ ಕಾರ್ಯ ನಿರ್ವಹಣೆ ಸುಧಾರಿಸಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?

ಶ್ರೀ ಎ.ಬಿ.ಪಾಟೀಲ್ (ಗಣಿ ಮತ್ತು ಭೂವಿಜ್ಞಾನ ಮತ್ತು ಪರಿಸರ ಜೀವಿಶಾಸ್ತ್ರ ಸಚಿವರು):

ಅ) ಹೌದು. ಪರಿಸರ ಇಲಾಖೆಯಡಿ ಬರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ದಿನಾಂಕ 27-11-97ರಂದು ಮೈಸೂರು ನಗರ ಪಾಲಿಕೆಗೆ ಕಾರಣ ಕೇಳುವ ಸೂಚನೆ ಪತ್ರ (NOTICE) ಜಾರಿಗೊಳಿಸಿರುತ್ತದೆ.

ಆ) ನೋಟೀಸನ್ನು ಜಲ (ಮಾಲಿನ್ಯ ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ, 1974ರ ನಿಯಮಗಳನ್ನು ಪಾಲಿಸದೇ ಇದ್ದ ಕಾರಣ ಈ ಕೆಳಕಂಡ ಕಾರಣಕ್ಕಾಗಿ ನೀಡಲಾಗಿರುತ್ತದೆ.

1. ರೊಚ್ಚು ನೀರಿನ ಸಂಗ್ರಹಣೆ, ಸಾಗಿಸುವಿಕೆ ಮತ್ತು ಶುದ್ಧೀಕರಣಕ್ಕೆ ರೊಚ್ಚು ನೀರಿನ ಶುದ್ಧೀಕರಣ ಘಟಕದ ಚಾಲನೆ ಮತ್ತು ಸಂಸ್ಕರಣೆಗಾಗಿ ಕಾಲಬದ್ಧ ಯೋಜನೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸದೇ ಇರುವುದರಿಂದ,

2. ರೊಚ್ಚು ನೀರನ್ನು ಶುದ್ಧೀಕರಿಸದೆ ಬಿಡುತ್ತಿರುವುದರಿಂದ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿಯನ್ನು ಪಡೆಯದೇ ಇರುವುದರಿಂದ,

3. ರೊಚ್ಚು ನೀರಿನ ಶುದ್ಧೀಕರಣ ಘಟಕವನ್ನು ಸ್ಥಾಪಿಸಿರುವುದಿಲ್ಲ ಮತ್ತು ಚಾಲನೆ ಮಾಡದೇ ಇದ್ದ ಕಾರಣ.

ಇ) ಮೈಸೂರು ಮಹಾನಗರ ಪಾಲಿಕೆಯ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನಗಳನ್ನು ಪಾಲಿಸಲು ಕ್ರಮ ಕೈಗೊಂಡಿರುತ್ತದೆ. ಅವರು ರೊಚ್ಚು ನೀರಿನ ಶುದ್ಧೀಕರಣ ಘಟಕವನ್ನು ಚರಂಡಿ ವ್ಯವಸ್ಥೆ (DRIANAGE DISTRICT) ಜಿಲ್ಲೆ ಎ, ಬಿ, ಸಿ ಮತ್ತು ಡಿ ನಿರಾಪೇಕ್ಷಣೆ ಪತ್ರಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ. ಅವರು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ನೆರವಿನಿಂದ ರಾಯನಕೆರೆ, ವಿದ್ಯಾರಣ್ಯಪುರ ಮತ್ತು ಕೆಸರೆ ಈ ಮೂರು ಸ್ಥಳಗಳಲ್ಲಿ ರೊಚ್ಚು ನೀರನ್ನು

ಶುದ್ಧೀಕರಿಸಲು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸುತ್ತಿರುತ್ತಾರೆ.

ಈ) ಉದ್ಭವಿಸುವುದಿಲ್ಲ.

ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಬಗ್ಗೆ.

1458 (1980)

ಶ್ರೀ ಕೆ.ವಿರುಪಾಕ್ಷಪ್ಪ (ಸಿಂಧನೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಮತ್ತು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಾಗಿ ಯಾವ ಯಾವ ಇಲಾಖೆಯವರು ಕಾರ್ಯ ನಿರ್ವಹಿಸಿದ್ದಾರೆ ಮತ್ತು ನಿರ್ವಹಿಸುತ್ತಿದ್ದಾರೆ.

ಆ) ಕ್ಷೇತ್ರಾಭಿವೃದ್ಧಿ ಅಧಿಕಾರಿಗಳೆಂದು ನೇರವಾಗಿ ಆಯ್ಕೆಗೊಂಡು ಇಂದು ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗೆ ಬಡ್ತಿ ಹೊಂದಿದ್ದರೂ ಅದರ ಸಮಾನಾಂತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಗಳಾರು?

ಇ) ಯಾವ ಯಾವ ತಾಲ್ಲೂಕು ಪಂಚಾಯತಿ ಸಮಿತಿಗಳಲ್ಲಿ ಕಾರ್ಯನಿರ್ವಾಹಕ ಹುದ್ದೆಗಳು ಎಂದಿನಿಂದ ಖಾಲಿ ಇವೆ, ಇವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಾರ್ತಾ ಮತ್ತು ಪ್ರಚಾರ ಸಚಿವರು):

ಅ) ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ಈ ಕೆಳಗೆ ತಿಳಿಸಿದ ಇಲಾಖೆಯ ಅಧಿಕಾರಿಗಳು ಕಾರ್ಯನಿರ್ವಹಿದ್ದಾರೆ ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ:

- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
- ಕರ್ನಾಟಕ ಆಡಳಿತ ಸೇವೆ
- ಕೃಷಿ ಮತ್ತು ತೋಟಗಾರಿಕೆ
- ಕರ್ನಾಟಕ ಸರ್ಕಾರದ ಸಚಿವಾಲಯ